ಅವರ ಅಗತ್ಯ ನಮಗೆ ವಿಪರೀತವಾಗಿತ್ತು. ಆದರೆ ಕಂಪೆನಿ ಶುರುವಾಗಿ ಎರಡು ಮೂರು ವರ್ಷಕ್ಕೆಲ್ಲಾ, ಸರಕಾರದ ಸಹವಾಸ ಕಡಿಮೆಯಾಗುತ್ತಲೇ ಹೋದ್ದರಿಂದ ಅವರ ಅಗತ್ಯ ಕಡಿಮೆಯಾಗಿ ಹೋಗಿತ್ತು. ಆದರೆ ಅಷ್ಟೊಂದು ಒಳ್ಳೆಯ ಕೆಲಸಗಾರರನ್ನು ಕಳೆದುಕೊಳ್ಳುವ ಮನಸ್ಸು ಮ್ಯಾನೇಜ್‌ಮೆಂಟ್‌ಗಿರಲಿಲ್ಲ. ಆದ್ದರಿಂದ ಕಂಪೆನಿಯ ದಿನನಿತ್ಯದ ಆಗುಹೋಗಿನ ಇತರೆ ಕೆಲಸಗಳನ್ನು ನೋಡಿಕೊಳ್ಳುವಂತೆ ಅವರನ್ನು ಒಪ್ಪಿಸಿದ್ದರು. ಕಂಪೆನಿಯ ನೌಕರರಿಗೆ ಒಳ್ಳೆಯ ಕಾಫಿ ಬೇಕೆಂದರೂ ಅವರೇ, ಕಂಪೆನಿಯ ವಾರ್ಷಿಕೋತ್ಸವಕ್ಕೆ ಫೈವ್ ಸ್ಟಾರ್ ಹೋಟೆಲಿನ ಸಭಾಂಗಣ ಬೇಕೆಂದರೂ ಅವರೇ! ಅತ್ಯಂತ ಸರಾಗವಾಗಿ ಅವರು ತಮ್ಮ ಹೊಸ ಜವಾಬ್ದಾರಿಗೆ ಹೊಂದಿಕೊಂಡು ಬಿಟ್ಟಿದ್ದರು.

"ಇದೇನು ರಂಗಣ್ಣ ಅವರೆ, ಲೋಹದ ಚೂರುಗಳನ್ನು ಇಟ್ಟುಗೊಂಡು ಕೂತಿದೀರಾ? ಏನಿವು? ಗೊಂಬೆಯಾಟ ಆಡೋ ತರಹ ಕಾಣ್ತಾ ಇದೆ" ಅಂತ ನಾನು ಕೇಳಿದೆ.

"ಅಯ್ಯೋ ಸಾರ್, ಎಂತಹ ಮಾತಾಡಿಬಿಟ್ಟಿರಿ! ಅವು ಕನ್ನಡದ ಅಕ್ಷರಗಳು ಸಾರ್, ಲೋಹದ ಚೂರುಗಳಲ್ಲ" ಎಂದು ಪಶ್ಚಾತ್ತಾಪದ ಧ್ವನಿಯಲ್ಲಿ ಹೇಳಿದರು. ಆಗಲೇ ನನಗೆ ಆ ಲೋಹದ ಚೂರುಗಳು ಏನೆಂದು ಸ್ಪಷ್ಟವಾಗತೊಡಗಿದವು.

ಹಿಂದಿನ ರಾಜ್ಯೋತ್ಸವದ ಸಂದರ್ಭದಲ್ಲಿ, ಕಂಪೆನಿಯ ಗೇಟಿನ ಬಳಿಯ ಗೋಡೆಯ ಮೇಲೆ ಕನ್ನಡದಲ್ಲಿ ನಾಮಫಲಕವಿಲ್ಲವೆಂದು ಕನ್ನಡ ಹೋರಾಟಗಾರರ ಗುಂಪೊಂದು ವಿಪರೀತ ಗಲಾಟೆ ಎಬ್ಬಿಸಿ ಹೋಗಿತ್ತು. ಒಂದಿಷ್ಟು ಕಲ್ಲುಗಳನ್ನು ಕಂಪೆನಿಯ ಗ್ಲಾಸಿನ ಗೋಡೆಗಳಿಗೆ ಎಸೆದು, ಇಂಗ್ಲಿಷ್ ಅಕ್ಷರಗಳಿಗೆ ಮಸಿ ಬಳೆದು ಹೋಗಿದ್ದರು. ಅದನ್ನು ಸರಿ ಮಾಡಿಸುವುದರಲ್ಲಿ ಸಾಕಷ್ಟು ಖರ್ಚಾಗಿತ್ತು. ಆ ಕಾರಣಕ್ಕಾಗಿಯೇ ಆದಷ್ಟು ಬೇಗನೆ ಕನ್ನಡದ ಅಕ್ಷರಗಳಲ್ಲಿಯೂ ನಾಮಫಲಕವನ್ನು ಹಾಕಬೇಕೆಂದು ಕಂಪೆನಿಯ ಯಜಮಾನನಿಂದ ಅಪ್ಪಣೆ ಬಂದಿತ್ತು.

ಕನ್ನಡದಲ್ಲಿ ಒಂದಿಷ್ಟು ಕತೆ – ಪ್ರಬಂಧಗಳನ್ನು ಬರೆದುಕೊಂಡಿದ್ದ ಕಾರಣ, ಯಾವುದೇ ಕನ್ನಡಕ್ಕೆ ಸಂಬಂಧಿಸಿದ ವಿಷಯಕ್ಕೂ ಆಫೀಸಿನ ಎಲ್ಲರೂ ನನ್ನ ಬಳಿಗೆ ಬರುತ್ತಿದ್ದರು. ಆಫೀಸಿನ ಯಾವುದೋ ಪ್ರಾಜೆಕ್ಟಿಗೆ ನೇಟಿವಿಟಿಯ ಕನ್ನಡದ ಹೆಸರಿಡಬೇಕೆಂದು ನಿರ್ಧರಿಸಿದಾಗಲೂ ನನ್ನ ಬಳಿ ಬರುತ್ತಿದ್ದರು, ಸರಕಾರಕ್ಕೆ ಕಳುಹಿಸಬೇಕಾದ ಯಾವುದೋ ಪತ್ರವನ್ನು ಕನ್ನಡದಲ್ಲಿ ಅನುವಾದ ಮಾಡಿ ಟೈಪ್ ಮಾಡಿಕೊಡಬೇಕೆಂದರೂ ನನ್ನ ಬಳಿ ಬರುತ್ತಿದ್ದರು. ಆ ಕಾರಣಕ್ಕಾಗಿಯೇ ನಾಮಫಲಕದ ವಿಷಯವೂ ನನ್ನ ಬಳಿಗೇ ಬಂದಿತ್ತು.

ಕಂಪೆನಿಯ ಇಂಗ್ಲೀಷಿನ ನಾಮಫಲಕವನ್ನು ಮುಂಬಯಿಯ ಕಂಪೆನಿಯೊಂದರಲ್ಲಿ ಮಾಡಿಸಲಾಗಿತ್ತು. ಫಳಫಳನೆ ಹೊಳೆಯುವ ಲೋಹದಲ್ಲಿ ಇಂಗ್ಲಿಷ್ ಅಕ್ಷರಗಳನ್ನು ಮುಂಬಯಿಯವರು ಕೊರೆದು ಕಳುಹಿಸಿದ್ದರು. ಬೆಂಗಳೂರಿನಲ್ಲಿ ಅದೇ ಕೆಲಸವನ್ನು ಮಾಡುವ ಕಂಪೆನಿಗಿಂತಲೂ ಬಹಳ ಕಡಿಮೆ ಬೆಲೆಯಲ್ಲಿ ಅದನ್ನು ಮಾಡಿದ ಮುಂಬಯಿಯ ಆ ಕಂಪೆನಿ, ಎಲ್ಲಾ ಅಕ್ಷರಗಳನ್ನು ಒಂದು ಚೀಲದಲ್ಲಿ ಹಾಕಿ ಕೊರಿಯರ್ ಮಾಡಿತ್ತು. ಅವನ್ನೆಲ್ಲಾ ಬಹಳ ಸುಲಭವಾಗಿ ಕಂಪೌಂಡಿನ ಗೋಡೆಗೆ ಅಂಟಿಸಿ ಕೆಲಸ ಮುಗಿಸಿದ್ದೆವು. ಮುಂಬಯಿಯ ಕಂಪೆನಿಯನ್ನು ಅಂತರ್ಜಾಲದಲ್ಲಿ ಹುಡುಕಿದ ಕಾರಣಕ್ಕಾಗಿ ರಂಗಣ್ಣನವರನ್ನು ಎಲ್ಲರೂ ಹೊಗಳಿದ್ದರು. ಈಗ ಕನ್ನಡದ ಅಕ್ಷರಗಳನ್ನೂ ಅವರೇ ಮಾಡಿಕೊಡಲಿ ಎಂದು ಲಂಡನ್ನಿನಲ್ಲಿ ಕುಳಿತ ಕಂಪೆನಿಯ ಯಜಮಾನ ಅಪ್ಪಣೆ ಕೊಟ್ಟ. ನನಗೆ ಪಿಚ್ಚೆನ್ನಿಸಿತ್ತು. ಆದರೆ ಮುಂಬಯಿಯ ಕಂಪೆನಿಯವರು ಉತ್ಸಾಹ ತೋರಿಸಿದ್ದರು. ನೀವು ಫಾಂಟ್ ಮತ್ತು ಕನ್ನಡದ ಪಠ್ಯವನ್ನು